

1996ರ ಒಲಿಂಪಿಕ್ಸ್‌: ಪದಕದೊಂದಿಗೆ ಟೆನಿಸ್ ಆಟಗಾರ ಲಿಯಾಂಡರ್ ಪೇಸ್

## ಶೂಟಿಂಗ್‌ನಲ್ಲಿ ಮೂರು ಪದಕಗಳ ನಿರೀಕ್ಷೆ



ಒಲಿಂಪಿಕ್ಸ್‌ಗೆ ಸಿದ್ಧಗೊಂಡಿರುವ ಭಾರತ ಶೂಟಿಂಗ್ ತಂಡ ಈ ಬಾರಿ ಸಮರ್ಥವಾಗಿದೆ. ಎಲ್ಲರೂ ಸೇರಿ ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದಾರೆ. ಸ್ಪರ್ಧೆಯ ದಿನ ಏನಾಗುತ್ತದೆಯೋ ನೋಡಬೇಕು. ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಉತ್ತಮ ಭವಿಷ್ಯವಿದೆ, ಹಿಂದಿನ ಎರಡು ಕ್ರೀಡಾಕೂಟಗಳನ್ನು ಹೊರತುಪಡಿಸಿ ಶೂಟರ್‌ಗಳು ನಿರಂತರವಾಗಿ ಪದಕಗಳನ್ನು ಜಯಿಸುತ್ತಲೇ ಇದ್ದಾರೆ. 2012ರ ಲಂಡನ್ ಒಲಿಂಪಿಕ್ಸ್ ಬಳಿಕ ಶೂಟಿಂಗ್‌ನ ಸ್ಪರ್ಧೆಯ ಮಾದರಿ ಬದಲಾಗಿದ್ದರಿಂದ ಸ್ಪರ್ಧೆಯೂ ಹೆಚ್ಚಾಗಿ ಹೊಸ ಸವಾಲುಗಳನ್ನು ಎದುರಿಸಬೇಕಾಗುತ್ತಿದೆ. ಇದಕ್ಕೆ ನಮ್ಮವರೂ ಅಣಿಯಾಗುತ್ತಿದ್ದಾರೆ. ಭಾರತ ಈ ಬಾರಿ ಶೂಟಿಂಗ್‌ನಲ್ಲಿ ಕನಿಷ್ಠ ಮೂರು ಪದಕಗಳನ್ನಾದರೂ ಗೆಲ್ಲಬಹುದು ಎನ್ನುವ ಭರವಸೆಯಿದೆ.

ಪ್ರತಿ ಒಲಿಂಪಿಕ್ಸ್ ಬಂದಾಗಲೂ ಪದಕಗಳ ನಿರೀಕ್ಷೆ ಹೆಚ್ಚಾಗುತ್ತದೆ. ಇದಷ್ಟೇ ಆದರೆ ಸಾಲದು. ರಾಜ್ಯದಲ್ಲಿ ಬೆಂಗಳೂರು ಮಾತ್ರವಲ್ಲದೇ ಗ್ರಾಮೀಣ ಪ್ರದೇಶದಲ್ಲಿಯೂ ಶೂಟಿಂಗ್ ಪ್ರಗತಿ ಸಾಧಿಸಬೇಕಿದೆ. ಶಿಕ್ಷಣದ ನಿಯಮಗಳು ಮತ್ತು ಕ್ರೀಡೆಗೆ ಒಂದಕ್ಕೊಂದು ಸಂಬಂಧವಿದೆ. ನಮ್ಮಲ್ಲಿ ಪ್ರತಿಭಾನ್ವಿತ ಮಕ್ಕಳಿದ್ದರೂ ಎಲ್ಲರಿಗೂ ಶೂಟಿಂಗ್ ಕಲಿಯಲು ಸಾಧ್ಯವಾಗುತ್ತಿಲ್ಲ. ಆದೇ ಉತ್ತರ ಭಾರತದ ರಾಜ್ಯಗಳಲ್ಲಿ ಕ್ರೀಡಾ ವ್ಯವಸ್ಥೆಯೇ ಬೇರೆ ರೀತಿಯಿದೆ.

ಮಕ್ಕಳು ಓದದಿದ್ದರೂ ಕ್ರೀಡೆಯ ಮೂಲಕವಾದರೂ ಸಾಧನೆ ಮಾಡಲಿ ಎನ್ನುವ ಮನಸ್ಥಿತಿ ಹರಿಯಾಣ, ಗುಜರಾತ್, ಪಂಜಾಬ್ ರಾಜ್ಯಗಳ ಪೋಷಕರಲ್ಲಿದೆ. ಅಲ್ಲಿನ ಕ್ರೀಡಾಪಟುಗಳಿಗೆ ನೌಕರಿಯೂ ಬೇಗ ಸಿಗುತ್ತದೆ. ನಮ್ಮಲ್ಲಿ ಶೂಟಿಂಗ್‌ನಲ್ಲಿ ಸಾಧನೆ ಮಾಡಿದವರಿಗೆ ಪೊಲೀಸ್ ನೇಮಕಾತಿಯಲ್ಲಿ ಎಸ್‌.ಐ. ತನಕ ಅವಕಾಶವನ್ನು ಇತ್ತೀಚೆಗೆ ಕಲ್ಪಿಸಲಾಗಿದೆ. ಯಾವುದೇ ಕ್ರೀಡೆಯಾದರೂ ನೌಕರಿ ಮತ್ತು ಬದುಕು ಕಟ್ಟಿಕೊಳ್ಳುವ ಅವಕಾಶಗಳಿದ್ದರೆ ಮಾತ್ರ ಬೆಳವಣಿಗೆಯಾಗಲು ಸಾಧ್ಯ.

ರಾಜಸ್ಥಾನದಲ್ಲಿ ರಾಷ್ಟ್ರೀಯ ಟೂರ್ನಿಯಲ್ಲಿ ಚಾಂಪಿಯನ್ ಆದವರಿಗೆ ಪೊಲೀಸ್ ನೌಕರಿ ಸಿಗುತ್ತದೆ. ಅದೇ ರೀತಿ ರಾಜ್ಯದಲ್ಲಿಯೂ ಮಾಡಿದರೆ ಕ್ರೀಡಾಪಟುಗಳ ಸಂಖ್ಯೆ ಏರಿಕೆಯಾಗುತ್ತದೆ. ಒಲಿಂಪಿಕ್ಸ್‌ನಲ್ಲಿ ಮತ್ತಷ್ಟು ಪದಕಗಳ ಹೊಳಪು ಕಾಣಬಹುದು.

**–ಪ್ರಕಾಶ್ ನಂಜಪ್ಪ,** ಅಂತರರಾಷ್ಟ್ರೀಯ ಶೂಟರ್



ಬ್ರೆಜಿಲ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಸಾಕ್ಷಿ ಮಲಿಕ್ ಅವರನ್ನು ಹೊತ್ತು ಸಂಭ್ರಮಿಸಿದ ಕೋಚ್ ಕುಲ್ದೀಪ್ ಸಿಂಗ್

ತೋರಿದ ಪ್ರದರ್ಶನ ಆಟಗಾರರ ಆತ್ಮವಿಶ್ವಾಸ ಹೆಚ್ಚಿಸಿದೆ.

ಹಾಕಿಯಲ್ಲಿ 12 ತಂಡಗಳು ಪಾಲ್ಗೊಂಡಿದ್ದು ತಲಾ ಆರು ತಂಡಗಳಿಂದ ಎರಡು ಗುಂಪುಗಳನ್ನು ಮಾಡಲಾಗಿದೆ. ಭಾರತ 'ಬಿ' ಗುಂಪಿನಲ್ಲಿ ಸ್ಥಾನ ಹೊಂದಿದೆ. ಬೆಲ್ಜಿಯಂ, ಆಸ್ಟ್ರೇಲಿಯಾ, ಅರ್ಜೆಂಟೀನಾ, ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ತಂಡಗಳು ಇದೇ ಗುಂಪಿನಲ್ಲಿದ್ದು 'ಡ್ರ್ಯಾಗ್‌ಫ್ಲಿಕ್ಕರ್ ಹಾಗೂ ಡಿಫೆಂಡರ್' ಆಟಗಾರ ಹರ್ಮನ್‌ಪ್ರೀತ್ ಸಿಂಗ್ ನೇತೃತ್ವದ ಭಾರತ, ಜುಲೈ 27ರಂದು ನ್ಯೂಜಿಲೆಂಡ್ ಎದುರು ಆಡುವ ಮೂಲಕ ಅಭಿಯಾನ ಆರಂಭಿಸಲಿದೆ. ಗುಂಪಿನಲ್ಲಿ ಮೊದಲ ನಾಲ್ಕು ಸ್ಥಾನಗಳನ್ನು ಪಡೆಯುವ ತಂಡಗಳು ಕ್ವಾರ್ಟರ್ ಫೈನಲ್ ತಲುಪಲಿವೆ. ಬಳಿಕ ನಾಕೌಟ್ ಪಂದ್ಯಗಳು ಜರುಗಲಿವೆ.

ಭಾರತ ಮಹಿಳಾ ಹಾಕಿ ತಂಡ 2016ರ ರಿಯೊ ಡಿ ಜನೈರೊ ಒಲಿಂಪಿಕ್ಸ್‌ನಲ್ಲಿ 12ನೇ ಸ್ಥಾನ ಮತ್ತು ಹಿಂದಿನ ಕ್ರೀಡಾಕೂಟದಲ್ಲಿ ನಾಲ್ಕನೇ ಸ್ಥಾನ ಗಳಿಸುವ ಮೂಲಕ ಸರ್ವಶ್ರೇಷ್ಠ ಸಾಧನೆ ಮಾಡಿತ್ತು. ಆದರೆ ಈ ಬಾರಿ ಅರ್ಹತೆ ಪಡೆದುಕೊಳ್ಳುವಲ್ಲಿ ತಂಡ ವಿಫಲವಾಗಿದೆ.

### 'ಚಿನ್ನದ ಹುಡುಗ' ನೀರಜ್ ಚೋಪ್ರಾ

ಅಥ್ಲೆಟಿಕ್ಸ್‌ನಲ್ಲಿ ಎಲ್ಲರ ನಿರೀಕ್ಷೆಗೂ ಮೀರಿ ಸಾಧನೆ ಮಾಡುತ್ತಿರುವ ಹರಿಯಾಣದ ಪಾಣಿಪತ್‌ನ ನೀರಜ್ ಚೋಪ್ರಾ ಟೋಕಿಯೊ ಒಲಿಂಪಿಕ್ಸ್‌ನ ಜಾವೆಲಿನ್ ಎಸೆತ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಅಥ್ಲೀಟ್ ಎನ್ನುವ ಸಾಧನೆ ಮಾಡಿದ್ದರು.

'ಚಿನ್ನದ ಹುಡುಗ' ಎನಿಸಿಕೊಂಡ ಬಳಿಕ 2022ರಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 88.13 ಮೀಟರ್ ಜಾವೆಲಿನ್ ಎಸೆದು ಬೆಳ್ಳಿ ಪದಕ ಪಡೆದುಕೊಂಡಿದ್ದರು. ಕಳೆದ ವರ್ಷ ಹಂಗರಿ ದೇಶದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್ (88.17 ಮೀಟರ್) ಮತ್ತು ಏಷ್ಯನ್ ಗೇಮ್ಸ್‌ನಲ್ಲಿ (88.88 ಮೀ.) ಚಿನ್ನದ ಪದಕಗಳನ್ನು ಗಳಿಸಿದ್ದರು. ಒಲಿಂಪಿಕ್ಸ್‌ನಲ್ಲಿ ನೀರಜ್ ಪದಕ ಗೆದ್ದಾಗ ಎಸೆದಿದ್ದ ದೂರ 87.58 ಮೀಟರ್ ಆಗಿದ್ದು, ಟೂರ್ನಿಯಿಂದ ಟೂರ್ನಿಗೆ ತೋಳ್ಬಲದ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತಿದ್ದಾರೆ.

26 ವರ್ಷದ ನೀರಜ್ ಚೋಪ್ರಾ 2016ರ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನದ ಪದಕ, 2018ರಲ್ಲಿ ಗೋಲ್ಡ್ ಕೋಸ್ಟ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ, ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ – ಹೀಗೆ ಹಂತಹಂತವಾಗಿ ಪದಕಗಳನ್ನು ಗೆದ್ದು ಸಾಧನೆಯ ಗುಚ್ಛ ಕಟ್ಟಿದ್ದಾರೆ.

ಸರಿಯಾಗಿ ಒಂದು ದಶಕದ ಹಿಂದೆ